## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 28/2021 ಪಿ.ಡಬ್ಲ್ಯೂಃ 1

ಸಿಡಬ್ಲೂಃ 1

ಸಾಕ್ಷಿದಾರರ ಹೆಸರು : ಗಣೇಶರಾಯ

ತಂದೆಯ ಹೆಸರು : ಶಾಬು ನಾಯ್ಕ

ವಯಸ್ಸು : 51 ವರ್ಷ

ಉದ್ಯೋಗ : ಅಬಕಾರಿ ನೀರಿಕ್ಷಕರು ಯಲ್ಲಾಪುರ , ಅಬಕಾರಿ ಇಲಾಖೆ,

ವಾಸ್ತವ್ಯ :

ಯಲ್ಲಾಪುರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 05-08-2022

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು ಅಗಸ್ಟ 2017 ರಿಂದ ಡಿಸೆಂಬರ 2020 ರವರೆಗೆ ಅಬಕಾರಿ ನಿರೀಕ್ಷಕರಾಗಿ ಜಿಲ್ಲಾ ತಂಡ ಕಾರವಾರದಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ .

ನಾನು ದಿನಾಂಕಃ 06-01-2020 ರಂದು ನನ್ನ ಜಿಲ್ಲಾ ತಂಡ ಸಿಬ್ಬಂದಿಯಾದ ಚಾಸಾ 2, 3 ಮತ್ತು ನಾಗರಾಜ ಕೂಬಿಹಾಲ ಅವರೊಂದಿಗೆ ರಾತ್ರಿ ಸರಕಾರಿ ವಾಹನ ಸಂಖ್ಯೆ ಕೆಎ 30/ಜಿ-0495 ನೇದರಲ್ಲಿ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಗಸ್ತು ಮಾಡುತ್ತಿದ್ದಾಗ ರಾತ್ರಿ ಸುಮಾರು 8-30 ಗಂಟೆಗೆ ನನಗೆ ಒಬ್ಬ ವ್ಯಕ್ತಿವಾಹನ ಸಂಖ್ಯೆ ಜಿಎ-08 ಇ -27520 ಮಾರುತಿ ಸುಜುಕಿ ಕಂಪನಿಯ ಜೆನ್ LXI ವಾಹನದಲ್ಲಿ ಅಕ್ರಮವಾಗಿ ಗೋವಾದಿಂದ ಕಾರವಾರ ಕಡೆಗೆ ಗೋವಾ ಮದ್ಯವನ್ನು ಸಾಗಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದ ಮೇರೆಗೆ ಸದಾಶಿವಗಡ ಟೋಲನಾಕಾ ಹತ್ತಿರ ಸುಮಾರು 900 ಗಂಟೆಗೆ ಸದ್ರಿ ವಾಹನ ಬರುವುದನ್ನು ಕಂಡು ಚಾಲಕನಿಗೆ ವಾಹನವನ್ನು ನಿಲ್ಲಿಸಲು ಸೂಸಿದಾಗ , ಚಾಲಕನು ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ಓಡಲು ಪ್ರಾರಂಭಿಸಿದನು ನಂತರ ನಮ್ಮ ಸಿಬ್ಬಂದಿಯವರಾದ ಚಾಸಾ -2 ಮತ್ತು 3 ರವರು ಆರೋಪಿಯನ್ನು ಸುತ್ತುವರಿದು ವಾಹನದ ಕಡೆಗೆ ಕರೆದುಕೊಂಡು ಬಂದರು .ನಂತರ ಅರೋಪಿಯನ್ನು ತಾನು ಎಲ್ಲಿಂದ ಬಂದಿರುತ್ತಿಯಾ ಎಂದು ವಿಚಾರಿಸಲಾಗಿ ಸದಾಶಿವಗಡದಿಂದ ಬಂದಿರುತ್ತೇನೆ ಎಂದು ಹೇಳಿದನು . ಸದಿರ ವಾಹನದಲ್ಲಿ ಯಾವ ವಸ್ತುಗಳು ಇವೆ ಎಂದು ಪ್ರಶ್ನಿಸಿದಾಗ ಆರೋಪಿಯು ಸೂಕ್ತ ಉತ್ತರ ಕೊಡದೇ ಇರುವ ಕಾರಣ, ಸದ್ರಿ ವಾಹವನನ್ನು ಶೋಧಿಸಬೇಲಕಾಗುತ್ತದೆ , ಮತ್ತು ಸುತ್ತಲಿನ ಜನರಿಗೆ ಸದ್ರಿ

ವಾಹನದಲ್ಲಿ ಯಾವದೇ ರೀತಿಯ ಅಕ್ರಮವಾಗಿ ಸಾಗಿಸುತ್ತಿರುವ ಮದ್ಯ ಕಂಡು ಬಂದರೆ  ನೀವುಗಳು ಬಂದರೆ ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡಾಗ ಅವರು ಒಪ್ಪದೇ ಇದ್ದ ಕಾರಣ  ಇಲಾಖಾ ಸಿಬ್ಬಂದಿಯಾದ ಚಾಸಾ -2 ಮತ್ತು 3 ರವರನ್ನು ಪಂಚರಾಗಲು ಕೇಳಿಕೊಡಾಗ ಅವರು ಒಪ್ಪಿದರು. ಮಾನ್ಯ ನ್ಯಾಯಾಲಯದಿಂದ  ಶೋಧನಾ ವಾರಂಟ ಪಡೆಯಲು ಸಮಾಯಾವಕಾಶ ಇಲ್ಲವೆಂದು ತಿಳಿಸಿ ಕ,ಅ . ಕಾಯ್ದೆಯ  ಕಲಂ 54 ರಡಿಯ ಸುಮುಚಿತ  ಆಧಾರ ವರದಿಯನ್ನು ತಯಾರಿಸಿ, ವಾಹನದ ಕೂಲಂಕಷವಾಗಿ ಪರಿಶೀಲಿಸಲಾಯಿತು.  ನ್ಯಾಯಾಲಯದ ಮುಂದಿರುವ ಸದ್ರಿ ಶೋಧನೆ ಸಮುಚಿತ ಆಧಾರ ವನ್ನು ನೋಡುತ್ತಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು.  ಅರದಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ವಾಹನವನ್ನು ಪರಿಶೀಲಿಸಲಾಗಿ ವಾಹನದ ಹಿಂದಿನ ಸೀಟಿನ ಕೆಳಭಾಗದಲ್ಲಿ ಗೋವಾ ರಾಜ್ಯದಲ್ಲಿ ತಯಾರಿಸಿದ್ದ ಮತ್ತು ಗೋವಾ ರಾಜ್ಯದಲ್ಲಿ ಮಾರಾಟಕ್ಕೆ ಮನ್ನಣೆ ಪಡೆದ 750 ಎಂಎಲ್ ನ ಮ್ಯಾಕಡೊಲ ನಂ 1 ವಿಸ್ಕಿ  14 ಬಾಟಲಿಗಳು ದೊರೆತವು .

ನಂತರ ವಾಹನವನ್ನು ಪೇಲಸಿಸಲಾಗಿ ಸದ್ರಿ ವಾಹನವು ಮಾರುತಿ ಸೂಜಿಕಿ ಕಂಪನಿಯ ಜೆನ LXI ಗುರುತಿಸಿದ್ದು ಅದರ ನೋಂದಣಿ ಸಂಖ್ಯೆ ಜಿಎ 08/ಇ-2750 ಆಗಿರುತ್ತದೆ . ವಾಹನ ಚಾಲಕನ ಬಗ್ಗೆ ವಿಚಾರಿಸಲಾಗಿ ಅವರು ತನ್ನ  ಹೆಸರು ಶ್ರೀಪಾದ ಕಾಶಿನಾಥ ಕೊಳಂಬಕರ , ವಯಸ್ಸು 25, ಸಾಃ ಪಾದ್ರಿಬಾಗ , ಚರ್ಚ ಹತ್ತಿರ , ಕಾರವಾರ ಎಂದು ತಿಳಿಸಿದರು .  ನಂತರ ಜಪ್ತು ಮಾಡಿದ ಮದ್ಯ ವನ್ನು ಪಂಚರ ಸಮಕ್ಷಮ 750 ಎಂಎಲ್ ನ ಮ್ಯಾಕಡೊಲ ನಂ 1 ವಿಸ್ಕಿ 4 ಬಾಟಲಿಗಳನ್ನು ರಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡಿದ್ದು ಅವುಗಳಿಗೆ ಬಟ್ಟೆಯನ್ನು ಸುತ್ತು  ದಾರದಿಂದ ಸುತ್ತಿ ಅರಗಳನ್ನು ಹಾಕಿ ಇಲಾಖಾ ಶೀಲ್ ದಿಂದ ಸೀಲ್ ಮಾಡಲಾಯಿತು . ನಂತರ ಸಣ್ಣ ಸಣ್ಣ  ಮಾದರಿ ಚೀಟಿಗಳನ್ನು ತಯಾರಿಸಿ ಅವುಗಳಿಗೆ ನನ್ನ ಮತ್ತು ಪಂಚ ಸಾಕ್ಷಿಗಳ ಸಹಿಯನ್ನು ಮಾಡಿಸಿ ಸದ್ರಿ ಬಾಟಲುಗಳಿಗೆ ಅಂಟಿಸಲಾಯಿತು . ಸದ್ರಿ  ಮಾದರಿ ಪತ್ರವನ್ನು ಸಹ ಸ್ಥಳದಲ್ಲಿ ತಯಾಸಲಾಯಿತು . ನಂತರ ದಸ್ತಗಿರಿ ಮಾಡಿದ ಅರೋಪಿತಯನ್ನು , ಜಪ್ತು ಮಾಡಿದ ಮಧ್ಯವನ್ನು ಮತ್ತು ವಾಹನವನ್ನು ಪಂಚನಾಮೆಡಿಯಲ್ಲಿ ಇಲಾಖಾ  ವಶಕ್ಕೆ ಪಡೆದುಕೊಳ್ಳಲಾಯಿತು .  ಪಂಚನಾಮೆಯನ್ನು ರಾತ್ರಿ ಸುಮಾರು 9-15 ರಿಂದ 10-50 ರವರೆಗೆ ಬರೆದು ಮುಗಿಸಲಾಯಿತು. ನ್ಯಾಯಾಲಯದ ಮುಂದಿರು ಪಂಚನಾಮೆಯನ್ನು ಗುರುತಿಸಿದ್ದು , ಅದನ್ನು ನಿಪಿ-1 ಎಂದುಗುರುತಿಸಲಾಯಿತು ಮತ್ತು ನಿಪಿ-1 ರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಠಾಣೆಯಲ್ಲಿ  ಸರಕಾರ ಪರವಾಗಿ ದೂರನ್ನು ದಾಖಲಿಸಿ ,ಪ್ರ.ವ.ವ ವನ್ನು ತಯಾರಿಸಿ ನ್ಯಾಯಾಲಯಕ್ಕೆ ಸ್ವತ್ತು ಪಟ್ಟಿಯೊಂದಿಗೆ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.  ನಂತರ ಜಪ್ತು ಮಾಡಿದ ಮಧ್ಯವನ್ನು ರಸಾಯನಿಕ ಪರೀಕ್ಷೆಗಾಗಿ ದಿನಾಂಕಃ 07-02-2020 ರಂದು ನಮ್ಮ ಸಿಬ್ಬಂದಿಯಾದ ಚಾಸಾ 2 ರವರೊಂದಿಗೆ ಕಳುಹಿಸಿರುತ್ತೇನೆ . ನಂತರ ದಿನಾಂಕಃ 15-02-2022 ರಸಾಯನಿಕ ಪರೀಕ್ಷೆ ವರದಿಯನ್ನು ಪಡೆದುಕೊಂಡೆ .ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ಗುರುತಿಸುತ್ತೇನೆ . ನಂತರ ದಿನಾಂಕಃ 30-08-2020 ರಂದು ಗೋವಾ RTO  ರವರಿಗೆ  ಜಪ್ತು ಮಾಡಿದ ವಾಹನದ  ಮಾಲಿಕತ್ವದ ಬಗ್ಗೆ

ಮಾಹಿತಿಯನ್ನು ಪಡೆಯಲು ಪತ್ರವನ್ನು ಬರೆದಿರುತ್ತೇನೆ. ನಂತರ ಅವರಿಂದ ನಾನು ದಿನಾಂಕಃ 14–10–2020 ರಂದು ವರದಿಯನ್ನು ಪಡೆದಿರುತ್ತೇನೆ. ನಂತರ ದಿನಾಂಕಃ 18–09–2020 ವಾಹನದ ಮಾಲಿಕರಾದ ಚಾಸಾ–4 ರವರಿಗೆ ನೋಟಿಸನ್ನು ನೀಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಚಾಸಾ–7 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ ನ್ಯಾಯಾದ ಮುಂದಿರು ಫಿರ್ಯಾದಿಯನ್ನು ನೋಡುತ್ತಿದ್ದು , ಅದನ್ನು ನಿಪಿ–3 ಎಂದು ಗುರುತಿಸಲಾಯಿತು . ಅದರಲ್ಲಿರುವ ನನ್ನ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು . ಪ್ರ .ವ. ವ ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–4 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು . ಸ್ವತ್ತು ಪತ್ರವನ್ನು ನೋಡುತ್ತಿದ್ದು ನಿಪಿ–5 ಎಂದು ಗುರುತಿಸಲಾಯಿತು . ಅದರಲ್ಲಿರುವ ನನ್ನ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು . ಮಾದರಿ ಶೀಲು ಪತ್ರವನ್ನು ನೋಡುತ್ತಿದ್ದು ನಿಪಿ–6 ಎಂದು ಗುರುತಿಸಲಾಯಿತು . ಅದರಲ್ಲಿರುವ ನನ್ನ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ರಸಾಯನಿಕ ಪೇರಿಕ್ಷಗಾಗಿ ಎಫ್ ಎಸ್ ಎಲ್ ಧಾರವಾಡ ಇವರಿಗೆ ಕಳುಹಿಸಿದ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–7 ಎಂದು ಗುರುತಿಸಲಾಯಿತು . ಅದರಲ್ಲಿರುವ ನನ್ನ ಸಹಿಯನ್ನು ನಿಪಿ–7(ಎ) ಎಂದು ಗುರುತಿಸಲಾಯಿತು . ದಿನಾಂಕಃ 14–02–2020 ರಂದು ಎಫ್ ಎಸ್ ಎಲ್ ಧಾರವಾಡ ಇವರಿಂದ ಬಂದ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ–8 ಎಂದು ಗುರುತಿಸಲಾಯಿತು . ಅದರಲ್ಲಿರುವ ನನ್ನ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು . RTO ಗೋವಾರವರಿಗೆ ನಾನು ಬರೆದ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಪಿ–9 ಎಂದು ಗುರುತಿಸಲಾಯಿತು . ಅದರಲ್ಲಿರುವ ನನ್ನ ಸಹಿಯನ್ನು ನಿಪಿ–9(ಎ) ಎಂದು ಗುರುತಿಸಲಾಯಿತು . RTO ಗೋವಾ ರವರಿಗೆ ಬರೆದ ಪತ್ರವು ಅವರಿಗೆ ತಲುಸಿರುತ್ತದೆ ಎಂಬ ಸ್ವಿಕೃತಿಯನ್ನು ನೋಡುತ್ತಿದ್ದು, ಅದನ್ನು ನಿಪಿ–10 ಎಂದು ಗುರುತಿಸಲಾಯಿತು . RTO ಗೊವಾ ರವರಿಂದ ಬಂದ ವರದಿಯನ್ನು ನಿಪಿ–11 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ–11(ಎ) ಎಂದು ಗುರುತಿಸಲಾಯಿತು . ಚಾಸಾ–4 ರವರಿಗೆ ನೀಡಿದ ನೋಟಿಸನ್ನು ನೋಡುತ್ತಿದ್ದು, ಅದನ್ನು ನಿಪಿ–12 ಎಂದು ಗುರುತಿಸಲಾಯಿತು . ಅದರಲ್ಲಿರುವ ನನ್ನ ಸಹಿಯನ್ನು ನಿಪಿ–12(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರು ಮು.ಮವಾಲುಗಳನ್ನು ನೋಡಿ ಗುರುತಿಸುತ್ತೇನೆ ಅವುಗಳನ್ನು ಅನುಕ್ರಮವಾಗಿ ಮು.ಮಾ 1,2,3 ಮತ್ತು 4 ಎಂದು ಗುರುತಿಸಲಾಯಿತು. ಸದ್ರಿ ಮು.ಮಾಲುಗಳ ಮೇಲಿರುವ ನನ್ನ ಸಹಿಗಳನ್ನು 1(ಎ) ರಿಂದ 4(ಎ) ಎಂದು ಗುರುತಿಸಲಾಯಿತು . ನ್ಯಾಯಾಲಯದ ಮುಂದಿರುವ ಅರೋಪಿಯನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ಆರೋಪಿ ಪರ ವಕೀಲರಿಂದ**

ಈ ಪ್ರಕರಣದಲ್ಲಿ ಪಿಯರ್ಯಾದಿದಾರರು ಮತ್ತು ಭಾಗಶಃ ತನಿಖಾಧಿಕಾರಿಗಳು ಎಂದರೆ ಸರಿ . ದೂರನ್ನು ನೀಡಿದವರು ನಾನೇ , ಅದೇ ರೀತಿ ದಾಖಲು ಮಾಡಿಕೊಂಡಿದ್ದು ನಾನೇ ಎಂದರೆ ಸರಿ . ದೂರು ದಾಖಲು

ಮಾಡಿಕೊಂಡಿದ್ದು ನಾವೇ ಆಗಿದ್ದರಿಂದ ತನಿಖೆಯನ್ನು ಬೇರೆ ಅಧಿಕಾರಿ ಮಡಬೇಕಾಗಿತ್ತು ಎಂದು ಕೇಳಿದಾಗ ನಮ್ಮ ಇಲಾಖೆಯಲ್ಲಿ ಅಧಿಕಾರಿಗಳ ಅಭಾವ ಇರುವುದರಿಂದ ದೂರನ್ನು ಕೊಡುವುದೇ ನಾವೇ , ತನಿಖೆಯನ್ನು ಮಾಡುವುದು ನಾವೇ ಎಂದುಸಾಕ್ಷಿ ನುಡಿದಿರುತ್ತಾರೆ . ನಿಮ್ಮ ಠಾಣೆಯಲ್ಲಿ SHO ಇಲ್ಲದ ಕಾರಣ ನೀವೆ ಪ್ರ ವ ವ ಯನ್ನು ದಾಖಲಿಸಿ ಕೊಂಡಿರುತ್ತೇನೆ ಎಂದರೆ ಸರಿ .

ಘಟನಾ ಸ್ಥಳ ರಾಷ್ಟ್ರೀಯ ಹೆದ್ದಾರಿ –66 ಆಗಿರುತ್ತದೆ ಎಂದರೆ ಸರಿ . ಅಲ್ಲಿ ಸತತವಾಗಿ ವಾಹನ ಸಂಚಾರ ಇದೆ ಎಂದರೆ ಸರಿ . ಆ ದಾರಿಯಿಂದ ಬರುವ ಕಾಲಕ್ಕೆ ಗೋವಾ ರಾಜ್ಯದ ಚೆಕ್ ಪೋಸ್ಟ ಮತ್ತು ಕರ್ನಾಟಕ ಅಬಕಾರಿ ಇಲಾಖೆ ಚೆಕ್ ಪೋಸ್ಟವನ್ನು ದಾಟಿಯೇ ಬರಬೇಕು ಎಂದರೆ ಸರಿ . ವಾಹನವನ್ನು ಬರುವ ಕಾಲಕ್ಕೆ ತಪಾಸಣೆ ಮಾಡಿಯೇ ಬಿಡುತಾತರೆ ಎಂದರೆ ಸರಿ .ಘಟನೆ ನಡೆದ ದಿನದಂದು ನೀವು ಬ್ಯಾರಿಕೇಡ್ ಹಾಕಿ ವಾಹನವನ್ನು ತಪಾಸಣೆ ಮಾಡಿದ್ದೀರಾ ಎಂದು ಕೇಳಲು ಸಾಕ್ಷಿಯು ಬ್ಯಾರಿಕೇಡ್ ಹಾಕಿರಲಿಲ್ಲ ನಾವು ಹಾಗೇಯೇ ತಪಾಸಣೆ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಸದ್ರಿ ದಿನದಂದು ನೀವು ಎಷ್ಟು ವಾಹನಗಳನ್ನು ತಪಾಸಣೆಗೆ ಒಳಪಡಿಸಿರುತ್ತೀರಿ ಎಂದರೆ ನಾವು ಮಾಹಿತಿ ಬಂದ ವಾಹನಗಳನ್ನು ತಪಾಸಣೆ ಮಾಡುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ . ಟೋಲನಾಕಾ ಹತ್ತಿರ ವಿದ್ಯುತ ಸಂಪರ್ಕ ಇರುವುದಿಲ್ಲ ಎಂದರೆ ಸರಿಯಲ್ಲ . ಘಟನಾ ಸ್ಥಳದಲ್ಲಿ ಸದ್ರಿ ವಾಹನವನ್ನು ನಿಲ್ಲಿಸಿರುವುದರಿಂದ ವಾಹನ ಸಂಚಾರಕ್ಕೆ ಯಾವುದೇ ರೀತಿಯ ತೊಂದರೆ ಆಗಿರುತ್ತದೆ ಎಂದರೆ ಸರಿಯಲ್ಲ .

ಈ ಪ್ರಕರಣದಲ್ಲಿರುವ ಸಾಕ್ಷಿಗಳು ನಮ್ಮ ,ಸಿಬ್ಬಂದಿ ವರ್ಗದವರು ಎಂದರೆ ಸರಿ . ಅಲ್ಲಿ ಸೇರಿದ ಜನರನ್ನು ಪಂಚರಾಗಲು ಕೇಳಿರುತ್ತೀರಾ ಅವರ ಹೆಸರನ್ನು ಹೇಳಬಹುದಾ ಎಂದರೆ ಸಾಕ್ಷಿಯು ಘಟನಾ ಸ್ಥಳದಲ್ಲಿದ್ದ ಜನರು ತಮ್ಮ ಹೆಸರನ್ನು ಹೇಳಲು ನಿರಾಕರಿಸಿದರು ಎಂದು ಸಾಕ್ಷಿಯು ಉತ್ತರಿಸಿರುತ್ತಾರೆ . ಆ ದಿನ ನೀವು ಯಾರ ಹೆಸರನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದು ಕೇಳಿದಾಗ ಸಾಕ್ಷಿಯು ನಾಗರಾಜ ಹೂವಿನಹಾಲ ಎಂದು ಉತ್ತರಿಸಿರುತ್ತಾರೆ. ಈ ಎಲ್ಲಾ ಮು.ಮಾಲುಗಳಿಗೆ ತಯಾರಿಸಿದ ದಿನಾಂಕ ಮತ್ತು ಬ್ಯಾಚ್ ನಂಬರ ಇರುತ್ತದೆ ಎಂದರೆ ಸರಿ . ಸದ್ರಿ ಮು.ಮಾಲುಗಳ ಮೇಲಿದ್ದ ತಯಾರಿಸಿದ ದಿನಾಂಕ , ಬ್ಯಾಚ್ ನಂಬರ ಮತ್ತು ಇತರ ಮಾಹಿತಿಯನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ . ಸದಿರ ಮಾಹಿತಿಯನ್ನು ಪಂಚನಾಮೆಯಲ್ಲಿ ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ . ಸದ್ರಿ ಮು.ಮಾಲುಗಳು ಠಾಣೆಯಲ್ಲಿ ಮೊದಲಗೆ ಇದ್ದ ಮು.ಮಾಲುಗಳು ಅದ್ದರಿಂದ ತಯಾರಿಸಿದ ದಿನಾಂಕ , ಬ್ಯಾಚ್ ನಂಬರ ಮತ್ತು ಇತರ ಮಾಹಿತಿಯನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ .

ಷದ್ರಿ ಮು.ಮಾಲುಗಳನು ಜಪ್ತು ಮಾಡಿದ 1 ತಿಂಗಳ ನಂತರ ರಸಾಯನಿಕ ಪರೀಕ್ಷಗಾಗಿ ಕಳುಹಿಸುತ್ತೇವೆ ಎಂದರೆ ಸರಿ . ಮು.ಮಾಲುಗಳ ಜಪ್ತು ಮಾಡಿದ ದಿನದಂದೆ ರಸಾಯನಿಕ ಪರೀಕ್ಷಗೆ ಕಳುಹಿಸಲು ಯಾವುದೇ ತೊಂದರೆ ಇರಲಿಲ್ಲ ಎಂದು ಕೇಳಿದಾಗ ಸಾಕ್ಷಿಯು ಸಿಬ್ಬಂದಿಯ ಕೊರತೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ . ಮು.ಮಾಲುಗಳನ್ನು ರಸಾಯನಿಕ ಪರಿಕ್ಷೆಗಾಗಿ ಕಳುಹಿಸಿರುವ ತನಕ ಎಲ್ಲಿ ಇಟ್ಟಿರುತ್ತೀರಿ ಎಂದರೆ ಸಾಕ್ಷಿಯು ಅವುಗಳನ್ನು ಗೊಡೌನದಲ್ಲಿ ಇಟ್ಟಿರುತ್ತೇವೆ ಎಂದು ಹೇಳಿರುತ್ತಾರೆ . ಆ ಗೋಡೌನಗೆ ಬೀಗ್ ಹಾಕಿ ಶೀಲ್ ಮಾಡಿ ರುತ್ತೇವೆ ಎಂದರೆ ಸರಿ . ಶೀಲ್ ಮಾಡುವ ಸಮಯದಲ್ಲಿ ಯಾವುದೇ ಸಾಕ್ಷಿದಾರರ ಸಹಿಯನ್ನು ಪಡೆದು ಕೊಂಡಿರುವುದಿಲ್ಲ ಎಂದರೆ ಸರಿ. ಪಂಚನಾಮೆ ಮಾಡುವ ಮೊದಲು ಅಂಗಜಪ್ತಿ ಪಂಚನಾಮೆ ಮಾಡಿರುವುದಿಲ್ಲ ಎಂರದೆ ಸರಿ . ಷದ್ರಿ ದಿನದಂದು ನಾವು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ , ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಮು.ಮಾಲುಳಿಗೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಮು.ಮಾಲುಗಳನ್ನು ರಸಾಯನಿಕ ಪರೀಕ್ಷಗೆ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ . ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ .

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

**ಹೆ.ಪ್ರ ದ.ನ್ಯಾದಂ. ಕಾರವಾರ**